# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:25–04–2025 ರಂದು ಮಂಗಳವಾರ ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ ಇಲ್ಲಿ ನಡೆದ "ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಗೋಪಿನಾಥ್ ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 3. | ಡಾ. ಕೇಶವ ಹೆಚ್, ಜಂಟಿ ನಿರ್ದೇಶಕರು | ಸದಸ್ಯರು |
| 4. | ಡಾ. ಸಂಧ್ಯಾ ಕಾವೇರಿ, ಪ್ರಾಂಶುಪಾಲರು | ಸದಸ್ಯರು |
| 5. | ಶ್ರೀ ಉಲ್ಲಾಸ್ ಇ.ಜಿ., ಪ್ರಾಂಶುಪಾಲರು | ಸದಸ್ಯರು |
| 6. | ಡಾ. ಚಿದಾನಂದ ಎನ್.ಕೆ., ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಎಂ. ವೆಂಕಟೇಶ್, ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು | ಸದಸ್ಯರು |
| 9. | ಡಾ.ಬಿ.ಜಿ. ಚನ್ನಪ್ಪ, ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ರಾಜಣ್ಣ ಕೆ. ಪ್ರಾಂಶುಪಾಲರು | ಸದಸ್ಯರು |
| 11. | ಡಾ. ರಾಕೇಶ್ ಎಸ್.ಪಿ., ಪ್ರಾಂಶುಪಾಲರು | ಸದಸ್ಯರು |
| 12. | ಡಾ. ಶಿವಕುಮಾರ್ ಜಿ.ಎಸ್, ಪ್ರಾಂಶುಪಾಲರು | ಸದಸ್ಯರು |
| 13. | ಡಾ. ಜಿ.ಎಂ. ಗಣೇಶ್, ಪ್ರಾಂಶುಪಾಲರು | ಸದಸ್ಯರು |
| 14. | ಡಾ. ರಾಜೇಶ್ವರ್ ಎ.ಎನ್, ಪ್ರಾಧ್ಯಾಪಕರು | ಸದಸ್ಯರು |
| 15. | ಡಾ. ರಮೇಶ್ ಹೆಚ್.ಎನ್. ಪ್ರಾಧ್ಯಾಪಕರು | ಸದಸ್ಯರು |
| 16. | ಡಾ. ಪಾಟೀಲ್ ಸಂಗನಗೌಡ ಎಸ್., ಪ್ರಾಧ್ಯಾಪಕರು | ಸದಸ್ಯರು |
| 17. | ಡಾ. ಜಿ. ಪ್ರಶಾಂತ ನಾಯಕ, ಪ್ರಾಧ್ಯಾಪಕರು. | ಸದಸ್ಯರು |
| 18. | ಡಾ. ಜಗನ್ನಾಥ ಕೆ. ಡಾಂಗೆ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 19. | ಡಾ. ಗುರುಲಿಂಗಯ್ಯ ಎಂ, ಡೀನರು, ಕಲಾ ನಿಕಾಯ | ಸದಸ್ಯರು |
| 20. | ಡಾ. ಆರ್. ಹಿರೇಮಣಿನಾಯ್ಕ್, ಡೀನರು, ವಾಣಿಜ್ಯ ನಿಕಾಯ | ಸದಸ್ಯರು |
| 21. | ಡಾ. ಜೆ. ನಾರಾಯಣ, ಡೀನರು, ವಿಜ್ಞಾನ ನಿಕಾಯ | ಸದಸ್ಯರು |
| 22. | ಡಾ. ಆರ್.ಹೆಚ್. ವಾಲ್ಮೀಕಿ, ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 23. | ಡಾ. ಜಿ. ಪ್ರಶಾಂತ ನಾಯಕ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರು | ಸದಸ್ಯರು |
| 24. | ಡಾ. ಯೋಗೇಂದ್ರ ಕೆ. ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ | ಸದಸ್ಯರು |
| 25. | ಡಾ. ಎನ್.ಡಿ. ವಿರೂಪಾಕ್ಷ, ನಿರ್ದೇಶಕರು ದೈಹಿಕ ಶಿಕ್ಷಣ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಶ್ರೀ ಎ.ಎಲ್. ಮಂಜುನಾಥ್ ಕೆ.ಎ.ಎಸ್., ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 2. | ಶ್ರೀ ಹೆಚ್.ಡಿ. ತಮ್ಮಯ್ಯ, ಶಾಸಕರು, ಚಿಕ್ಕಮಗಳೂರು ಕ್ಷೇತ್ರ | ಸದಸ್ಯರು |
| 3. | ಶ್ರೀ ಬಿ.ಕೆ. ಸಂಗಮೇಶ್ವರ, ಶಾಸಕರು, ಭದ್ರಾವತಿ | ಸದಸ್ಯರು |
| 4. | ಶ್ರೀ ಡಿ.ಎಸ್. ಅರುಣ್, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 5. | ಶ್ರೀ ಸೂರಜ್ ರೇವಣ್ಣ, ಶಾಸಕರು, ಕರ್ನಾಟಕ ವಿಧಾನ ಪರಿಷತ್ | ಸದಸ್ಯರು |
| 6. | ಡಾ. ನಾಗರಾಜ, ಪ್ರಾಧ್ಯಾಪಕರು | ಸದಸ್ಯರು |
| 7. | ಡಾ. ನಾಗರಾಜ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451



Scanned with OKEN Scanner

8. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
9. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
10. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. ಸದಸ್ಯರು
11. ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. ಸದಸ್ಯರು

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು(ಪರೀಕ್ಷಾಂಗ)ರವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ 30(1)(xiv) ಅನ್ವಯ ಯೋಜನೆ, ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ಮಂಡಳಿ ನಿರ್ದೇಶಕರಾಗಿ ನೇಮಕಗೊಂಡಿರುವ ಪ್ರೊ. ಯೋಗೇಂದ್ರ ಕೆ. ಪ್ರಾಧ್ಯಾಪಕರು, ಸ್ನಾತಕೋತ್ತರ ಪರಿಸರ ವಿಜ್ಞಾನ ವಿಭಾಗ ಇವರಿಗೆ ಸ್ವಾಗತ ಕೋರಿದರು. ಯೋಜನೆ, ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ಮಂಡಳಿ ನಿರ್ದೇಶಕರಾಗಿ ಅವಧಿ ಮುಗಿಸಿರುವ ಪ್ರೊ. ಆರ್ತೋಗಬನಾಯಕ ವೈ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ ಇವರ ಸೇವೆಯನ್ನು ಸ್ಮರಿಸಿ ಅಭಿನಂದಿಸಲಾಯಿತು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2025:ಎಸಿ–3.01:** ದಿನಾಂಕ:01–10–2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ಮಾನ್ಯ ಕುಲಪತಿಗಳು ಮಾತನಾಡಿ ವಿಷಯ ಸಂಖ್ಯೆ 2024:ಎಸಿ–2.18(1.2) ರಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವ ಹಿಂದಿನ ಕಲಿಕೆಯ ಕ್ರೆಡಿಟ್‌ಗಳನ್ನು ಸಂಗ್ರಹಿಸುವುದು ABC(Academic Bank Credit) ಕಡ್ಡಾಯವಾಗಿದ್ದು ಇದರ ಬಗ್ಗೆ ಇನ್ನು ಹೆಚ್ಚಿನ ಮಾಹಿತಿಯ ಅಗತ್ಯವಿದೆ. ಆದರೆ ABC ಅಳವಡಿಸಿಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ಯಾವುದೇ ಪ್ರದೇಶಕ್ಕೆ ಹೋದರೂ ತಾವು ಅಧ್ಯಯನ ಮಾಡಿರುವ ವಿಷಯಗಳ ಸಮಾನಾಂತರ (Equalence) ವಿಷಯಗಳನ್ನು ಅಧ್ಯಯನ ಮಾಡಬಹುದಾಗಿರುತ್ತದೆ. ಆದ್ದರಿಂದ ಸದ್ಯಕ್ಕೆ ಅದು ಹೇಗೆ ಇದೆಯೋ ಹಾಗೆಯೇ ಒಪ್ಪಿಕೊಳ್ಳೋಣ ಎಂದರು. ಪ್ರೊ.ಎಸ್ ಎಸ್. ಪಾಟೀಲ್ ರವರು ಮಾತನಾಡಿ ಶೈಕ್ಷಣಿಕ ವೇಳಾಪಟ್ಟಿ ಒಂದೊಂದು ವಿಶ್ವವಿದ್ಯಾಲಯದ್ದು ಒಂದೊಂದು ತರ ಇದೆ, ಶೈಕ್ಷಣಿಕ ವೇಳಾಪಟ್ಟಿ ಒಂದೇ ರೀತಿ ಇದ್ದರೆ ಅನುಕೂಲವಾಗುತ್ತದೆ ಎಂದರು. ಮಾನ್ಯ ಕುಲಪತಿಗಳು ಮಾತನಾಡಿ ಈ ಒಂದು ಬಾರಿ ಶೈಕ್ಷಣಿಕ ವೇಳಾಪಟ್ಟಿಯನ್ನು ಮುಂದೂಡದೇ ಈಗಿರುವಂತೆ ಪಾಲಿಸಿದರೆ ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಸರಿಯಾಗುತ್ತದೆ ಎಂದು ಹೇಳಿದರು.

ಡಾ. ಕೇಶವ್ ಇವರು ಮಾತನಾಡಿ ಬೇರೆ ಕೆಲವು ವಿಶ್ವವಿದ್ಯಾಲಯಗಳು ಶೈಕ್ಷಣಿಕ ವೇಳಾಪಟ್ಟಿಯನ್ನು ಮುಂದೂಡಿರುತ್ತಾರೆ ಆದ್ದರಿಂದ ನಮ್ಮ ವಿಶ್ವವಿದ್ಯಾಲಯದಲ್ಲೂ ಒಂದು ವಾರ ಮುಂದೂಡಬಹುದು ಎಂದರು. ಮಾನ್ಯ ಕುಲಪತಿಗಳು ಇದೊಂದು ಬಾರಿ ಹೆಚ್ಚುವರಿ ತರಗತಿಗಳನ್ನು ತೆಗೆದುಕೊಳ್ಳುವುದರ ಮೂಲಕ ಶೈಕ್ಷಣಿಕ ವೇಳಾಪಟ್ಟಿಯನ್ನು ಪಾಲನೆ ಮಾಡಿ ಎಂದು ಕೋರಿದರು. ಚರ್ಚೆಯ ನಂತರ ಈಗಿರುವ ಶೈಕ್ಷಣಿಕ ವೇಳಾಪಟ್ಟಿಯನ್ನು ಯಥಾವತ್ತಾಗಿ ಅನುಸರಿಸಲು ನಿರ್ಣಯಿಸಲಾಯಿತು.

ಡಾ. ಬಿ.ಜಿ. ಚನ್ನಪ್ಪ ಇವರು ಮಾತನಾಡಿ ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗದಿಂದ ಸಂಯೋಜನೆಯ ಮಾಹಿತಿಯನ್ನು ಕಾಲೇಜುಗಳಿಗೆ ಶೀಘ್ರವಾಗಿ ನೀಡುವಂತೆ ತಿಳಿಸಲು ಕೋರಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451



Scanned with OKEN Scanner

**ನಿರ್ಣಯ:** ಚರ್ಚೆಯ ನಂತರ ದಿನಾಂಕ:01-10-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಿದ ಸಭೆಯು ಕಾಲೇಜುಗಳ ಸಂಯೋಜನೆಯ ಮಾಹಿತಿಯನ್ನು ಕಾಲೇಜುಗಳಿಗೆ ಮುಂಚಿತವಾಗಿ ತಿಳಿಸುವಂತೆ ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗಕ್ಕೆ ತಿಳಿಸಲು ನಿರ್ಣಯಿಸಿತು.

**2025:ಎಸಿ-3.02:** ದಿನಾಂಕ:01-10-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ಡಾ. ಜೆ. ನಾರಾಯಣ್‌ರವರು ವಿಷಯ ಸಂಖ್ಯೆ 2024:ಎಸಿ-2.06(A) ರಲ್ಲಿ ಅನುಮೋದನೆಯಾಗಿರುವ ನ್ಯಾಕ್ ಎಸ್.ಎಸ್.ಆರ್. ವರದಿಗೆ ಅಗತ್ಯವಾಗಿರುವ ಗ್ರೀನ್ ಪಾಲಿಸಿ ಡಾಕ್ಯುಮೆಂಟ್‌ನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ ಎಂದರು. ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯಕ್ಕೆ ನ್ಯಾಕ್ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಅವಶ್ಯವಾಗಿ ಅಪ್‌ಲೋಡ್ ಮಾಡಬೇಕು ಎಂದು ಹೇಳಿದರು. ಉಳಿದಂತೆ ದಿನಾಂಕ:01-10-2024 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಯಥಾವತ್ತಾಗಿ ಅನುಮೋದಿಸಿತು.

**2025:ಎಸಿ-3.03:** ದಿನಾಂಕ:21-01-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ:21-01-2025 ರಂದು ನಡೆನ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿತು.

**2025:ಎಸಿ-3.04:** ದಿನಾಂಕ:21-01-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:21-01-2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.

**2025:ಎಸಿ-3.05:** ಬಿ.ಬಿ.ಎ. (SEP)ಯ ಮಾದರಿ ಪ್ರಶ್ನೆ ಪತ್ರಿಕೆಯನ್ನು ಪರಿಷ್ಕರಿಸುವ ಬಗ್ಗೆ.

**ಚರ್ಚೆ:** ವಾಣಿಜ್ಯ ನಿಕಾಯದ ಡೀನರಾದ ಪ್ರೊ. ಹಿರೇಮಣಿನಾಯ್ಕ್ ರವರು ಮಾತನಾಡಿ ಪ್ರಥಮ ವರ್ಷದ ಬಿ.ಬಿ.ಎ. ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಲ್ಲಿ ವಾಣಿಜ್ಯಶಾಸ್ತ್ರ ಓದದೇ ಇರುವ ವಿದ್ಯಾರ್ಥಿಗಳು ಸಹ ಪ್ರವೇಶ ಪಡೆಯುವುದರಿಂದ ಸದರಿ ವಿದ್ಯಾರ್ಥಿಗಳಿಗೆ Section 'A' ಯಲ್ಲಿ 02 ಅಂಕಗಳ ಪ್ರಶ್ನೆಗಳಿಗೆ ಉತ್ತರಿಸಲು ಕಷ್ಟವಾಗಬಹುದು ಹಾಗೂ Non NEP ಮತ್ತು NEP ಗಳಲ್ಲಿ ಬೇರೆ ಬೇರೆ ಮಾದರಿ ಪ್ರಶ್ನೆ ಪತ್ರಿಕೆಯಿದ್ದು, SEP ಪ್ರಶ್ನೆ ಪತ್ರಿಕೆ ಕೂಡ ಅದಕ್ಕಿಂತ ವಿಭಿನ್ನವಾಗಿರುವುದರಿಂದ ಇದು ಮೌಲ್ಯಮಾಪನಕ್ಕೂ ತೊಂದರೆಯಾಗಬಹುದು ಎಂದು ಸ್ನಾತಕ ನಿರ್ವಹಣಾಶಾಸ್ತ್ರ ಪರೀಕ್ಷಾ ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರು ತಿಳಿಸಿರುತ್ತಾರೆ ಎಂಬ ವಿಷಯವನ್ನು ಸಭೆಗೆ ಮಂಡಿಸಿದರು.

**ನಿರ್ಣಯ:** ಚರ್ಚೆಯ ನಂತರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬಿ.ಬಿ.ಎ. (SEP)ಯ ಮಾದರಿ ಪ್ರಶ್ನೆ ಪತ್ರಿಕೆಯನ್ನು ಪರಿಷ್ಕರಿಸಲು ಸಭೆಯು ಅನುಮೋದನೆ ನೀಡಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

**2025:ಎಸಿ–3.06:** ದಿನಾಂಕ:02–04–2025 ಮತ್ತು ದಿನಾಂಕ:03–04–2025 ರಂದು ನಡೆದ ನಿಕಾಯಗಳ ಸಭೆಗಳ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಗೆ ಮಂಡಿಸುವ ಕುರಿತು.

**ಚರ್ಚೆ:** ಕುಲಸಚಿವ(ಪರೀಕ್ಷಾಂಗ)ರವರು ವಿಷಯ ಮಂಡಿಸಿದರು. ಡಾ. ನಾರಾಯಣ್ ಜೆ. ರವರು ಮಾತನಾಡಿ ದಿನಾಂಕ: 02–04–2025ರಂದು ನಡೆದ ವಿಜ್ಞಾನ ನಿಕಾಯದ ಸಭೆಯ ವಿಷಯ ಸಂಖ್ಯೆ ವಿಜ್ಞಾನ ನಿ:2024–25(1)ರಲ್ಲಿ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿ ಸಭೆಯಲ್ಲಿ ಕೆಲವು ವಿಶ್ವವಿದ್ಯಾಲಯಗಳಲ್ಲಿ ಜಾರಿಯಲ್ಲಿರುವಂತೆ, ಎರಡು ವರ್ಷದ ಎಂ.ಎಲ್.ಐ.ಸಿ ಪದವಿಗೆ ಸೇರಿರುವ ವಿದ್ಯಾರ್ಥಿಗಳು ಒಂದು ವರ್ಷದ ಅವಧಿಯ 1 ಮತ್ತು 2ನೇ ಸೆಮಿಸ್ಟರ್‌ನ್ನು ಪೂರೈಸಿದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯಕತೆ ಇದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಬಿ.ಎಲ್.ಐ.ಸಿ. ಪದವಿಗೆ ಪರಿಗಣಿಸುವ ಕುರಿತು ಅಧ್ಯಯನ ಮಂಡಳಿ ಸಭೆಯಲ್ಲಿ ನಿರ್ಣಯವಾಗಿದ್ದು ಈ ವಿಷಯವನ್ನು ಪರಿಶೀಲನೆ ನಂತರ ಅನುಮೋದಿಸಬೇಕೆಂದು ಈ ವಿಷಯವನ್ನು ಹೊರತುಪಡಿಸಿ ಉಳಿದಂತೆ ಅಧ್ಯಯನ ಮಂಡಳಿಯ ನಡಾವಳಿಗಳನ್ನು ನಿಕಾಯದ ಸಭೆಯಲ್ಲಿ ಅನುಮೋದಿಸಲಾಗಿದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಡಾ. ವಾಲ್ಮೀಕಿಯವರು ಮಾತನಾಡಿ ಯಾವುದೇ ಆಧಾರವಿಲ್ಲದೆ ಬಿ.ಎಲ್.ಐ.ಸಿ. ಪದವಿ ನೀಡುವುದು ಸರಿಯಲ್ಲ ಎಂದರು. ಡಾ. ಜಗನ್ನಾಥ್ ಕೆ. ಡಾಂಗೆರವರು ಮಾತನಾಡಿ ಯಾವುದೇ ಒಂದು ಪದವಿಗೆ ಅದರದ್ದೇ ಆದ ಕೋರ್ಸ್ ಸ್ಟ್ರಕ್ಚರ್ ಇರುತ್ತದೆ. ಏನೂ ಇಲ್ಲದೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಮಾಡಿದ್ದಾರೆ ಎಂಬ ಕಾರಣಕ್ಕೆ ನಮ್ಮ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳುವುದು ಸೂಕ್ತ ಅಲ್ಲ ಎಂದರು. ಡಾ. ಯೋಗೇಂದ್ರ ರವರು ಮಾತನಾಡಿ ಪ್ರಸ್ತುತ ಎನ್‌ಇಪಿ/ಎಸ್‌ಇಪಿ ಬಂದಿರುವುದರಿಂದ ಅಳವಡಿಸಿಕೊಂಡರೆ ವಿದ್ಯಾರ್ಥಿಗಳಿಗೆ ಅನುಕೂಲ ಆಗಬಹುದು ಎಂದರು.

ಮಾನ್ಯ ಕುಲಪತಿಗಳು ಸರ್ಟಿಫಿಕೇಟ್ ಅಥವಾ ಡಿಪ್ಲೊಮಾ ಕೋರ್ಸ್ ಎಂದು ನೀಡಬಹುದು ಎಂದರು.

ವಿಶ್ವವಿದ್ಯಾಲಯದ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಡಾ. ಧರಣಿಕುಮಾರ್ ಇವರನ್ನು ಸಭೆಗೆ ಕರೆಸಿ ಮಾಹಿತಿ ಕೇಳಲಾಯಿತು.

ಸದರಿಯವರು ಯುಜಿಸಿಯ ನಿಯಮಾವಳಿಗಳಲ್ಲಿ ಒಟ್ಟು ಎರಡು ವರ್ಷದ ಪದವಿಯಲ್ಲಿ ಒಂದು ವರ್ಷದ ಕೋರ್ಸಿಗೆ ಬಿ.ಎಲ್.ಐ.ಸಿ ಮತ್ತು ಒಂದು ವರ್ಷದ ಕೋರ್ಸಿಗೆ ಸ್ನಾತಕೋತ್ತರ ಪದವಿ ನೀಡಬಹುದು ಎಂದು ಇರುತ್ತದೆ ಎಂದು ಹೇಳಿದರು. ಇದನ್ನು ತುಮಕೂರು ಸೇರಿದಂತೆ ಬೇರೆ ವಿಶ್ವವಿದ್ಯಾಲಯಗಳವರು ಅಳವಡಿಸಿಕೊಂಡಿರುತ್ತಾರೆ. ಪದವಿ ಆಧಾರದ ಮೇಲೆ ಕೆಲಸಕ್ಕೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅವರ ಮನವಿಯ ಮೇರೆಗೆ ಸ್ನಾತಕೋತ್ತರ ಪದವಿಯ 1 ಮತ್ತು 2ನೇ ಸೆಮಿಸ್ಟರ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಬಿ.ಎಲ್.ಐ.ಸಿ. ಪದವಿ ನೀಡಬೇಕಾಗಿರುತ್ತದೆ ಎಂದು ಹೇಳಿದರು.

ಕಲಾ ನಿಕಾಯದ ಡೀನರಾದ ಪ್ರೊ. ಗುರುಲಿಂಗಯ್ಯ ಎಂ. ಇವರು ಮಾತನಾಡಿ ದಿನಾಂಕ:03–04–2025ರಂದು ನಡೆದ ಕಲಾ ನಿಕಾಯದ ಸಭೆಯಲ್ಲಿ ಸ್ನಾತಕ ಗೃಹ ವಿಜ್ಞಾನ(ಹೋಮ್ ಸೈನ್ಸ್) ವಿಷಯವನ್ನು ಪ್ರಸ್ತುತ ಬಿ.ಎ. ಗೃಹ ವಿಜ್ಞಾನ ಎಂದು ಹೆಸರಿಸಲಾಗಿರುವುದರಿಂದ ಕಲಾ ನಿಕಾಯದ ಸಭೆಗೆ ವಿಷಯವನ್ನು ಅನುಮೋದನೆಗಾಗಿ ಮಂಡಿಸಲಾಗಿತ್ತು. ಆದರೆ ಹೋಮ್‌ಸೈನ್ಸ್ ವಿಷಯದಲ್ಲಿ ಹೆಚ್ಚಾಗಿ ವಿಜ್ಞಾನ ವಿಷಯಗಳೇ ಇದ್ದು ಅಧ್ಯಯನ ಮಂಡಳಿಯಲ್ಲಿರುವ ಅಧ್ಯಕ್ಷರು ಹಾಗೂ ಸದಸ್ಯರುಗಳು ಕೂಡ ವಿಜ್ಞಾನ ವಿಷಯದ ಪರಿಣಿತರೇ ಆಗಿರುತ್ತಾರೆ. ಆದ್ದರಿಂದ ಸಂಯುಕ್ತ ಅಧ್ಯಯನ ಮಂಡಳಿಯನ್ನು ರಚಿಸಬೇಕೆಂದು ಚರ್ಚೆಯಾಗಿದ್ದು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ನಿಕಾಯದ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರು ಸಂಯುಕ್ತ ಅಧ್ಯಯನ ಮಂಡಳಿ ರಚಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ಸದಸ್ಯರಾದ ಡಾ. ಯೋಗೇಂದ್ರರವರು ಸದರಿ ವಿಷಯವು ಒಂದೇ ಕಾಲೇಜಿನಲ್ಲಿ ಇದ್ದು, ವಿದ್ಯಾರ್ಥಿಗಳ ಸಂಖ್ಯೆಯೂ ಕಡಿಮೆ ಇರುವುದರಿಂದ ವಿಶ್ವವಿದ್ಯಾಲಯದ ಖರ್ಚು ವೆಚ್ಚಗಳ ಹಿತದೃಷ್ಟಿಯಿಂದ ಸದರಿ ಕೋರ್ಸ್‌ನ್ನು ನಿಲ್ಲಿಸುವುದು ಸೂಕ್ತ ಅಥವಾ ಬೇರೆ ಬೇರೆ ಕಾಲೇಜುಗಳಲ್ಲಿ ಸದರಿ ಪದವಿಯನ್ನು ಪ್ರಾರಂಭಿಸಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಬಹುದು ಎಂದು ಅಭಿಪ್ರಾಯಪಟ್ಟರು.

ಮಾನ್ಯಕುಲಪತಿಗಳು ಸದರಿ ಕೋರ್ಸ್‌ನ ಪಠ್ಯಕ್ರಮ ತುಂಬಾ ಚೆನ್ನಾಗಿದೆ. ಒಳ್ಳೆಯ ಕೋರ್ಸ್ ಆದರೆ ಈ ಕೋರ್ಸ್ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿಯ ಕೊರತೆ ಇದೆ ಎಂದರು. ಮುಂದುವರೆದು ಮಾತನಾಡಿ ಎಲ್ಲಾ ಕೋರ್ಸುಗಳ ಪಠ್ಯಕ್ರಮವನ್ನು ಪರಿಷ್ಕರಿಸಿ ಮತ್ತಷ್ಟು ಉತ್ತಮ(ಅಪ್ ಗ್ರೇಡ್)ಗೊಳಿಸಬೇಕು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿ ಸಭೆಯಲ್ಲಿ ಕೆಲವು ವಿಶ್ವವಿದ್ಯಾಲಯಗಳಲ್ಲಿ ಜಾರಿಯಲ್ಲಿರುವಂತೆ, ಎರಡು ವರ್ಷದ ಎಂ.ಎಲ್.ಐ.ಸಿ ಪದವಿಗೆ ಸೇರಿರುವ ವಿದ್ಯಾರ್ಥಿಗಳು ಒಂದು ವರ್ಷ ಅವಧಿಯ 1 ಮತ್ತು 2ನೇ ಸೆಮಿಸ್ಟರ್‌ನ್ನು ಪೂರೈಸಿದ ಸಂದರ್ಭದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಅವಶ್ಯಕತೆ ಇದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಬಿ.ಎಲ್.ಐ.ಸಿ. ಪದವಿಗೆ ಪರಿಗಣಿಸುವ ಕುರಿತ ವಿಷಯವನ್ನು ಇನ್ನೊಮ್ಮೆ ಅಧ್ಯಯನ ಮಂಡಳಿ ಸಭೆಯಲ್ಲಿ ಮಂಡಿಸಿ ಪಠ್ಯಕ್ರಮ ಪರಿಶೀಲಿಸಿ ಮುಂಬರುವ ಸಭೆಗೆ ವಿಷಯವನ್ನು ಮಂಡಿಸುವಂತೆ ತಿಳಿಸಿ ವಿಷಯವನ್ನು ಮುಂದೂಡಲಾಯಿತು.

ಚರ್ಚೆಯ ನಂತರ ಪ್ರಸ್ತುತ ಕಲಾ ನಿಕಾಯದ ಸಭೆಯಲ್ಲಿ ಬಿ.ಎ. ಗೃಹ ವಿಜ್ಞಾನ ವಿಷಯವನ್ನು ಅನುಮೋದಿಸಿರುವುದನ್ನು ಒಪ್ಪಿದ ಸಭೆಯು ಮುಂದಿನ ದಿನಗಳಲ್ಲಿ ಸದರಿ ವಿಷಯ ಪಠ್ಯಕ್ರಮವನ್ನು ಪರಿಶೀಲಿಸಿ ಗೃಹ ವಿಜ್ಞಾನ ವಿಷಯವನ್ನು ವಿಜ್ಞಾನ ನಿಕಾಯಕ್ಕೆ ಸೇರಿಸುವುದೋ ಅಥವಾ ಸಂಯುಕ್ತ ಮಂಡಳಿ ಮಾಡುವುದು ಅಥವಾ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದರಿಂದ ಸದರಿ ವಿಷಯದ ಪದವಿಯನ್ನು ರದ್ದುಪಡಿಸುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಬಹುದು ಎಂದು ಸಭೆಯು ನಿರ್ಣಯಿಸಿತು.

## ಶೈಕ್ಷಣಿಕ ವಿಭಾಗ

**2025:ಎಸಿ–3.07:** Endowment Lecture from Eminent Scholars – ಇವರ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಕುರಿತು.

**ಚರ್ಚೆ:** ಕುಲಸಚಿವ(ಪರೀಕ್ಷಾಂಗ)ರವರು ವಿಷಯ ಮಂಡಿಸಿ ಮಾತನಾಡಿ **Endowment Lecture from Eminent Scholars** - ಇವರ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಕುರಿತಂತೆ, ದಾನಿಗಳಾದ **Conveners & Research Alumni of Prof. J. Keshavayya, Prof. J. Keshavayya Felicitation Committee, Dept. of Chemistry, Kuvempu University, Shankaraghatta** – ಇವರು 2024–25ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ **ವಿಜ್ಞಾನ ನಿಕಾಯದ ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ** ವಿಷಯದಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಸಂಬಂಧ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಸಂಬಂಧ ನಿಗದಿತ ಅರ್ಜಿ, ಕರಾರು ಪತ್ರ ಹಾಗೂ ದತ್ತಿನಿಧಿ ಮೊತ್ತ **ರೂ.1,83,000/–** (ರೂಪಾಯಿ ಒಂದು ಲಕ್ಷದ ಎಂಭತ್ತೂರು ಸಾವಿರಗಳು ಮಾತ್ರ) ಗಳ ಡಿ.ಡಿ. ಮೂಲಕ ಸಲ್ಲಿಸಿದ್ದು, ಸದರಿ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಕ್ರಮ ವಹಿಸಲಾಗಿದೆ.

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**



Scanned with OKEN Scanner

ಸದರಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವ ಸಂಬಂಧ ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ ಎಂದು ಹೇಳಿದರು.

**ನಿರ್ಣಯ:** ಚರ್ಚೆಯ ನಂತರ Endowment Lecture from Eminent Scholars – ಇವರ ಹೆಸರಿನಲ್ಲಿ ದತ್ತಿನಿಧಿ ಉಪನ್ಯಾಸ ಮಾಲಿಕೆಯನ್ನು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲು ಸಭೆಯು ಅನುಮತಿ ನೀಡಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2025:ಎಸಿ–3.08:** ವಿಶ್ವವಿದ್ಯಾಲಯದ ಸ್ನಾತಕ / ಸ್ನಾತಕೋತ್ತರ ವಿಭಾಗಗಳಲ್ಲಿರುವ ಅಧ್ಯಾಪಕರುಗಳಿಗೆ UGC Notification F/9-1/2010CPS/MISC pt.Vol-II ಅನ್ನು ವಿಶ್ವವಿದ್ಯಾಲಯದಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳುವ ಕುರಿತು.

**ಚರ್ಚೆ:** ಕುಲಸಚಿವರು(ಪರೀಕ್ಷಾಂಗ)ರವರು ಮಾತನಾಡಿ, ಯುಜಿಸಿಯು ದಿನಾಂಕ: 06–06–2024 ರಂದು ಪ್ರಕಟಣೆಯನ್ನು ಹೊರಡಿಸಿ, ವಿಶ್ವವಿದ್ಯಾಲಯದ ಸ್ನಾತಕ / ಸ್ನಾತಕೋತ್ತರ ವಿಭಾಗಗಳಲ್ಲಿರುವ ಅಧ್ಯಾಪಕರುಗಳಿಗೆ 12 ರಿಂದ 13ಎ (ಸಹಾಯಕ ಪ್ರಾಧ್ಯಾಪಕ ಹುದ್ದೆಯಿಂದ ಸಹ ಪ್ರಾಧ್ಯಾಪಕ ಹುದ್ದೆಗೆ) ಹಾಗೂ 13ಎ ಇಂದ 14 (ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ) ಶೈಕ್ಷಣಿಕ ಹಂತಗಳಿಗೆ ವೃತ್ತಿಪದೋನ್ನತಿಯ ಸ್ಥಾನೀಕರಣದ ಸೌಲಭ್ಯ ಪಡೆಯಲು ಯುಜಿಸಿ–2010ರ ನಿಯಮಾವಳಿ ಅಥವಾ 2018ರ ನಿಯಮಾವಳಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ವೃತ್ತಿ ಪದೋನ್ನತಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿರುತ್ತದೆ. ಅದರಂತೆ 13ಎ ಮತ್ತು 14ಕ್ಕೆ ವೃತ್ತಿ ಪದೋನ್ನತಿಯ ಸ್ಥಾನೀಕರಣ ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ನಿಗದಿಪಡಿಸಿರುತ್ತದೆ.

| ಶೈಕ್ಷಣಿಕ ಹಂತ | ವೃತ್ತಿ ಪದೋನ್ನತಿ ಹೊಂದಲು ನಿಗದಿಪಡಿಸಿರುವ ಮಾನದಂಡಗಳು | |
|---|---|---|
| | 2010 | 2018 |
| 13ಎ ಸಹ ಪ್ರಾಧ್ಯಾಪಕ | Length of Service - Assistant Professor with three completed years in this Stage<br>(i) For those possess a Ph.D Degree, a minimum of one publication made during the period of service as Assistant Professor:<br>(ii) For those with a M.Phil, Degree, a minimum of two publications made during the period of service as Assistant Professor, and<br>(iii) For those without Ph.D., or M.Phil degree, at least three publications during the period of service as Assistant Professor in 8000 AGP. | i. Assistant Professors with three completed years service in the AGP of Rs.8000/-. Academic level 12<br>ii. A PhD degree in relevant/Allied/ discipline<br>iii. One Refresher course/Methodology workshop Syllabus upgradation Training/ (of At least 2 Weeks/10 days duration) OR two courses of 1 week duration (5 days in lieu of 10 days program) OR **ONE** MOOCs course or contribution towards development of e-content in 4th quadrant (at least one quadrant) with minimum of 10 modules |
| 14 ಪ್ರಾಧ್ಯಾಪಕ | Length of Service - Associate Professor with three completed years of service in Stage 4 and possessing a Ph.D Degree in the relevant discipline shall be eligible to be appointed / promoted and designated as Professor and be placed in the next higher grade (Stage 5) | i. Associate Professors with 3 completed years of service in the Academic level 13A(AGP of Rs.9000/-.)<br>ii. A PhD degree in relevant/Allied/ discipline<br>iii. has produced at least 1 Ph.d under the guidance, evidences of significant research during evaluation period |

ಮೇಲ್ಕಂಡ ಮಾಹಿತಿಗಳೊಂದಿಗೆ, ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಹಾಗೂ ಘಟಕ ಕಾಲೇಜುಗಳ ಅಧ್ಯಾಪಕರಿಗೆ ವೃತ್ತಿ ಪದೋನ್ನತಿ ನೀಡಲು ದಿನಾಂಕ:06–06–2024ರ ಯು.ಜಿ.ಸಿ., ಪ್ರಕಟಣೆಯನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಸರ್ಕಾರದ ಅನುಮೋದನೆಗೆ ಕಳುಹಿಸುವ ಸಲುವಾಗಿ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ನಿರ್ಣಯ: ಚರ್ಚೆಯ ನಂತರ, ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ ಕಾಲೇಜುಗಳ ಅಧ್ಯಾಪಕರ ವೃತ್ತಿಪದೋನ್ನತಿಗೆ ಸಂಬಂಧಿಸಿದಂತೆ, ದಿನಾಂಕ:06-06-2024ರ ಯು.ಜಿ.ಸಿ., ಪ್ರಕಟಣೆಯನ್ನು ವಿಶ್ವವಿದ್ಯಾಲಯದಲ್ಲೂ ಯಥಾವತ್ತಾಗಿ ಅಳವಡಿಸಿಕೊಳ್ಳುವ ಕ್ರಮಕ್ಕೆ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

## ಪರೀಕ್ಷಾ ವಿಭಾಗ

**2025:ಎಸಿ-3.09:** ಸ್ನಾತಕ Non-NEP ಪದವಿಗಳ ದ್ವಿಗುಣ ಅವಧಿ ಮುಗಿದ ಅನುತ್ತೀರ್ಣಗೊಂಡಿರುವ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಆಗಸ್ಟ್/ಸೆಪ್ಟಂಬರ್ – 2025 ರಲ್ಲಿ ನಡೆಯುವ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡುವ ಕುರಿತು.

ಚರ್ಚೆ: ಕುಲಸಚಿವ(ಪರೀಕ್ಷಾಂಗ)ರವರು ವಿಷಯ ಮಂಡಿಸಿ ಮಾತನಾಡಿ ವಿಶ್ವವಿದ್ಯಾಲಯದಲ್ಲಿ 2003ನೇ ಸಾಲಿನಿಂದ ಸೆಮಿಸ್ಟರ್ ಪದ್ಧತಿಯಲ್ಲಿ ಪ್ರವೇಶ ಪಡೆದ ಸ್ನಾತಕ ಪದವಿಗಳ ದ್ವಿಗುಣ ಅವಧಿ ಮುಗಿದು ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆಗೆ ಅವಕಾಶ ನೀಡುವಂತೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ SEP ಮತ್ತು NEP ಪಠ್ಯಕ್ರಮ ಪ್ರಾರಂಭಗೊಂಡಿರುವುದರಿಂದ, ಈ ಹಿಂದೆ 2003ನೇ ಸಾಲಿನಿಂದ ಸೆಮಿಸ್ಟರ್ ಪದ್ಧತಿಯಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶ ಪಡೆದು ದ್ವಿಗುಣ ಅವಧಿ ಮುಗಿದು ಅನುತ್ತೀರ್ಣಗೊಂಡ ಹಳೆಯ ವಿದ್ಯಾರ್ಥಿಗಳಿಗೆ ರೂ. 3500/-ಗಳ ಹೆಚ್ಚುವರಿ ಶುಲ್ಕದೊಂದಿಗೆ ಮುಂಬರುವ ಆಗಸ್ಟ್/ ಸೆಪ್ಟೆಂಬರ್ 2025ರಲ್ಲಿ ನಡೆಯುವ ಪರೀಕ್ಷೆಯನ್ನು ತೆಗೆದುಕೊಳ್ಳಲು ಒಂದು ಬಾರಿ ಅವಕಾಶ ಕಲ್ಪಿಸುವ ಸಲುವಾಗಿ ಸಭೆಗೆ ವಿಷಯ ಮಂಡಿಸಿದೆ ಎಂದು ಹೇಳಿದರು.

ಡಾ. ಯೋಗೇಂದ್ರರವರು ಮಾತನಾಡಿ ಅಷ್ಟು ಹಳೆಯ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶ ನೀಡದಿರುವುದೇ ಒಳ್ಳೆಯದು. ಹಳೆಯ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶ ನೀಡಿದಲ್ಲಿ ಅವರಿಗೆ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವುದು ಪರೀಕ್ಷೆ ನಡೆಸುವುದು ಇತ್ಯಾದಿ ಹೆಚ್ಚುವರಿ ಕೆಲಸಗಳು ಪರೀಕ್ಷಾ ವಿಭಾಗದಿಂದ ಮಾಡಬೇಕಾಗುತ್ತದೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ ಎಲ್ಲಾ ಪ್ರಕ್ರಿಯೆಗಳನ್ನು ಮಾಡಬೇಕಾಗಿರುತ್ತದೆ. ಆದ್ದರಿಂದ ಪರೀಕ್ಷೆಗೆ ಅವಕಾಶ ನೀಡದಿರುವುದು ಒಳ್ಳೆಯದು ಎಂದರು.

ಪ್ರೊ. ಹಿರೇಮಣಿನಾಯ್ಕ್‌ರವರು ಮಾತನಾಡಿ ಒಂದು ಬಾರಿ ಅವಕಾಶ ನೀಡಬಹುದು ಎಂದು ಹೇಳಿದರು.

ಕುಲಸಚಿವ ಪರೀಕ್ಷಾಂಗರವರು ಮಾತನಾಡಿ ಕಳೆದ ವರ್ಷ ಪರೀಕ್ಷೆಗೆ ಅವಕಾಶ ನೀಡಲಾಗಿದೆ. ಅದರಲ್ಲಿ ಅನುತ್ತೀರ್ಣರಾದವರಿಗೆ ಕೊನೆಯದಾಗಿ ಒಂದು ಅವಕಾಶ ನೀಡುವಂತೆ ವಿದ್ಯಾರ್ಥಿಗಳು ಮನವಿ ಸಲ್ಲಿಸಿರುತ್ತಾರೆ ಎಂದರು. ಡಾ. ಜಿ.ಎಂ. ಗಣೇಶ್ ರವರು ಮಾತನಾಡಿ ಪದೇ ಪದೇ ಕೊನೆಯ ಅವಕಾಶ ನೀಡುವಂತೆ ಮನವಿ ಸಲ್ಲಿಸುತ್ತಲೇ ಇರುತ್ತಾರೆ, ಅವಕಾಶ ನೀಡಿದರೆ ಮುಂದಿನ ವರ್ಷವೂ ಪುನ: ಅವಕಾಶ ನೀಡುವಂತೆ ಮನವಿ ಸಲ್ಲಿಸುತ್ತಾರೆ ಎಂದರು.

ಡಾ. ಪ್ರಭಾಕರ ಮಂಟೂರೆರವರು ಮಾತನಾಡಿ ಕೆಲವರು ಒಂದು ಪ್ರಮೋಷನ್ ಪಡೆಯುವ ಸಲುವಾಗಿ ಪದವಿ ಪಡೆಯುವುದು ಅಗತ್ಯವಿರುತ್ತದೆ ಎಂದು ಹೇಳಿದರು. ಮಾನ್ಯ ಕುಲಪತಿಗಳು ಮಾತನಾಡಿ ಯಾವುದೇ ಒಬ್ಬ ವ್ಯಕ್ತಿಯು ಪದವಿ ಪಡೆಯಲು ವಿಶ್ವವಿದ್ಯಾಲಯವು ಸೂಕ್ತ ವ್ಯವಸ್ಥೆ ಒದಗಿಸಬೇಕು. ಪದವಿ ನೀಡುವುದು ವಿಶ್ವವಿದ್ಯಾಲಯಗಳ ಕರ್ತವ್ಯವಾಗಿರುತ್ತದೆ. ಈಗಿನ ವಿದ್ಯಾಮಾನದಲ್ಲಿ ಪದವಿ ನೋಡಿ ಯಾರೂ ಕೆಲಸವನ್ನು ಕೊಡುವುದಿಲ್ಲ, ಪ್ರಭಾಕರ್ ರವರು ಹೇಳಿದಂತೆ ಪ್ರಮೋಷನ್ ಗೆ ಪದವಿ ಅಗತ್ಯವಿರಬಹುದು, ಆದ್ದರಿಂದ ದ್ವಿಗುಣ ಅವಧಿ ಮುಗಿದಿರುವ ವಿದ್ಯಾರ್ಥಿಗಳಿಗೆ ಒಂದು ಬಾರಿ ಅವಕಾಶ ನೀಡಬಹುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಡಾ. ಪ್ರಶಾಂತ್‌ನಾಯಕ್ ರವರು ಮಾತನಾಡಿ 21 ವರ್ಷಗಳಷ್ಟು ಹಳೆಯ ವಿದ್ಯಾರ್ಥಿಗಳು ಈಗ ಪರೀಕ್ಷೆ ಬರೆಯಲು ಅವಕಾಶ ನೀಡುವುದು ಸರಿಯಲ್ಲ ಇದಕ್ಕೆ ನನ್ನ ಆಕ್ಷೇಪಣೆ ಇದೆ ಎಂದರು. ಇದಕ್ಕೆ ಧ್ವನಿಗೂಡಿಸಿದ ಡಾ. ಯೋಗೇಂದ್ರರವರು ಪರೀಕ್ಷಾ ಅಕ್ರಮಗಳು ನಡೆಯಬಹುದು ಎಂದರು. ಡಾ. ಸಂಧ್ಯಾಕಾವೇರಿಯವರು ಮಾತನಾಡಿ ಹೀಗೆ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳು ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿ ಪರೀಕ್ಷೆಯನ್ನು ಬರೆಯುವುದಿಲ್ಲ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಸ್ನಾತಕ Non-NEP ಪದವಿಗಳ ದ್ವಿಗುಣ ಅವಧಿ ಮುಗಿದ ಅನುತ್ತೀರ್ಣಗೊಂಡಿರುವ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಆಗಸ್ಟ್/ಸೆಪ್ಟಂಬರ್ – 2025 ರಲ್ಲಿ ನಡೆಯುವ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡದಿರಲು ನಿರ್ಣಯಿಸಲಾಯಿತು. ಹಾಗೂ ಮುಂದಿನ ದಿನಗಳಲ್ಲಿ ಕೂಡ ದ್ವಿಗುಣ ಅವಧಿ ಮುಗಿದು ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶ ನೀಡುವಂತೆ ಯಾವುದೇ ಪ್ರಸ್ತಾವನೆಗಳನ್ನು ಸಲ್ಲಿಸಬಾರದು, ಸಲ್ಲಿಸಿದರೂ ಅಂತಹ ಪ್ರಸ್ತಾವನೆಗಳನ್ನು ಪರಿಗಣಿಸದಿರಲು ನಿರ್ಣಯಿಸಲಾಯಿತು.

**2025:ಎಸಿ–3.10: ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು**

**1) ಡಾ. ಜಿ.ಎಂ. ಗಣೇಶ್**

**ಅ) ಬಿ.ಎಡ್. ಪ್ರವೇಶಾತಿಯಲ್ಲಿ ಸಂಗ್ರಹಿಸಲಾಗುವ ಶುಲ್ಕದ ವಿಚಾರ :**

ಡಾ. ಜಿ.ಎಂ. ಗಣೇಶ್‌ರವರು ಮಾತನಾಡಿ ಪ್ರತಿ ವರ್ಷ ಬಿ.ಎಡ್ ಪದವಿಯ ಪ್ರವೇಶಾತಿ ಸಂದರ್ಭದಲ್ಲಿ ಇತರೆ ಶುಲ್ಕಗಳೊಂದಿಗೆ ರೋವರ್ಸ್ ಮತ್ತು ರೇಂಜರ್ಸ್ ಶುಲ್ಕ ರೂ. 30/– ಪಡೆಯಲಾಗುತ್ತದೆ ಮತ್ತು ಬಡ ವಿದ್ಯಾರ್ಥಿಗಳ ನಿಧಿ ರೂ. 60/– (ಪ್ರಥಮ ವರ್ಷ ರೂ. 24/– ಮತ್ತು ದ್ವಿತೀಯ ವರ್ಷ ರೂ. 36/–) ಈ ಶುಲ್ಕಗಳ ಪ್ರಯೋಜನ ಬಿ.ಎಡ್ ವಿದ್ಯಾರ್ಥಿಗಳಿಗೆ ಆಗುತ್ತಿಲ್ಲ. ಇವುಗಳನ್ನು ಪರಿಶೀಲಿಸುವ ಅಗತ್ಯವಿದೆ ಎಂದರು. ಬಿ.ಇಡಿ ಪದವಿಯು ಎರಡು ವರ್ಷಗಳಾಗಿರುವುದರಿಂದ ರೇಂಜರ್ಸ್ ಮತ್ತು ರೋವರ್ಸ್ ಪ್ರಮಾಣ ಪತ್ರವನ್ನು ಪಡೆಯಲು ವಿದ್ಯಾರ್ಥಿಗಳಿಗೆ ಆಗುವುದಿಲ್ಲ. ವಿದ್ಯಾರ್ಥಿಗಳಿಂದ ಶುಲ್ಕ ವಸೂಲು ಮಾಡಿ ವಿಶ್ವವಿದ್ಯಾಲಯಕ್ಕೆ ತಲುಪಿಸಿಕೊಡಲಾಗುತ್ತದೆ. ಆದರೆ ಆ ಶುಲ್ಕವನ್ನು ಯಾವ ರೀತಿ ವಿನಿಯೋಗ ಮಾಡಬೇಕು ಎಂಬ ಬಗ್ಗೆ ಮಾರ್ಗಸೂಚಿಗಳಿರುವುದಿಲ್ಲ. ಆದ್ದರಿಂದ ಆ ಶುಲ್ಕಗಳನ್ನು ಬಳಕೆ ಮಾಡಿರುವುದಿಲ್ಲ, ಬಿ.ಇಡಿ ಕೋರ್ಸ್‌ಗಳಿಗೆ ರೋವರ್ಸ್ ಮತ್ತು ರೇಂಜರ್ಸ್ ಸೂಕ್ತವಾಗುವುದಿಲ್ಲ, ಆದ್ದರಿಂದ ಈ ಶುಲ್ಕಗಳಿಗೆ ಬೇರೆ ಶೀರ್ಷಿಕೆ ನೀಡಿದಲ್ಲಿ ಬಳಕೆ ಮಾಡಿಕೊಳ್ಳಬಹುದು ಎಂದರು.

ಡಾ. ವಿರೂಪಾಕ್ಷ, ಎನ್.ಡಿ. ರವರು ಮಾತನಾಡಿ ರೋವರ್ಸ್ ಮತ್ತು ರೇಂಜರ್ಸ್ ಶೀರ್ಷಿಕೆ ಶುಲ್ಕವನ್ನು ಸರ್ಕಾರ ನಿಗದಿಪಡಿಸಿರುತ್ತದೆ ಸರ್ಕಾರದ ಆದೇಶದ ಮೇರೆಗೆ ಶುಲ್ಕ ಪಾವತಿಸಿಕೊಳ್ಳಲಾಗುತ್ತದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ ಬಿ.ಇಡಿ ಕಾಲೇಜುಗಳ ಒಕ್ಕೂಟದ ವತಿಯಿಂದ ಸರ್ಕಾರಕ್ಕೆ ಪತ್ರ ಬರೆದು ಬಿ.ಇಡಿ ಕೋರ್ಸ್‌ಗಳಿಗೆ ರೋವರ್ಸ್ ಮತ್ತು ರೇಂಜರ್ಸ್ ಸೂಕ್ತವಾಗುವುದಿಲ್ಲ ಆದ್ದರಿಂದ ರೋವರ್ಸ್ ಮತ್ತು ರೇಂಜರ್ಸ್ ಶುಲ್ಕವನ್ನು ಬಿ.ಇಡಿ ಪದವಿಗೆ ಕಡ್ಡಾಯ ಮಾಡಬೇಡಿ ಎಂದು ಮನವಿ ಕೊಡಿ ಎಂದು ಹೇಳಿದರು.

ಸುದೀರ್ಘ ಚರ್ಚೆಯ ನಂತರ ಸದರಿ ಶುಲ್ಕವನ್ನು ಪಡೆಯಬೇಕೆಂದು ಸರ್ಕಾರವೇ ನಿಗದಿ ಮಾಡಿರುವುದರಿಂದ, ಬಿ.ಇಡಿ ಕಾಲೇಜುಗಳ ವತಿಯಿಂದ ಸರ್ಕಾರಕ್ಕೆ ಪತ್ರ ಬರೆದು ಬಿ.ಇಡಿ ಕೋರ್ಸ್‌ಗಳಿಗೆ ರೋವರ್ಸ್ ಮತ್ತು ರೇಂಜರ್ಸ್ ಸೂಕ್ತವಾಗುವುದಿಲ್ಲ ಆದ್ದರಿಂದ ರೋವರ್ಸ್ ಮತ್ತು ರೇಂಜರ್ಸ್ ಶುಲ್ಕವನ್ನು ಬಿ.ಇಡಿ ಪದವಿಗೆ ಕಡ್ಡಾಯ ಮಾಡಬೇಡಿ ಎಂದು ಸರ್ಕಾರಕ್ಕೆ ಮನವಿ ಸಲ್ಲಿಸಲು ನಿರ್ಣಯಿಸಲಾಯಿತು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

* ಬಡ ವಿದ್ಯಾರ್ಥಿಗಳ ನಿಧಿ ರೂ. 60/- (ಪ್ರಥಮ ವರ್ಷ ರೂ. 24/- ಮತ್ತು ದ್ವಿತೀಯ ವರ್ಷ ರೂ. 36/-)

ಚರ್ಚೆಯ ನಂತರ ಈ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**ಆ) ಬಿ.ಎಡ್. ಶೈಕ್ಷಣಿಕ ವೇಳಾಪಟ್ಟಿ ವಿಚಾರ;**

ಚರ್ಚೆಯ ನಂತರ ಸರ್ಕಾರದ ಆದೇಶದಂತೆ ವೇಳಾಪಟ್ಟಿಯನ್ನು ಪಾಲಿಸಲು ನಿರ್ಣಯಿಸಲಾಯಿತು.

**2) ಡಾ. ರಾಕೇಶ್ ಎಸ್.ಪಿ.**

**ಅ) ಬಿ.ಇಡಿ ಪದವಿ ಪ್ರಶಿಕ್ಷಣಾರ್ಥಿಗಳಿಗೆ ಕ್ರೀಡಾ ಮತ್ತು ಸಾಂಸ್ಕೃತಿ ಕಾರ್ಯಕ್ರಮ ಆಯೋಜಿಸಿರುವ ಕುರಿತು.**

ಡಾ. ರಾಕೇಶ್ ಎಸ್.ಪಿ. ರವರು ಮಾತನಾಡಿ ಪ್ರತಿ ವರ್ಷ ಬಿ.ಇಡಿ ಪದವಿಯ ಪ್ರವೇಶಾತಿ ಶುಲ್ಕದಲ್ಲಿ ಪಠ್ಯೇತರ ಚಟುವಟಿಕೆ ಮತ್ತು ಕ್ರೀಡಾ ಶುಲ್ಕ ಸಂಗ್ರಹಿಸುತ್ತಿರುವುದು ಸರಿಯಷ್ಟೆ. ಆದರೆ ಕಳೆದ ಕೆಲವು ವರ್ಷಗಳಿಂದ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿರುವುದಿಲ್ಲ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಾ. ಎನ್.ಡಿ. ವಿರೂಪಾಕ್ಷರವರು ವಿಶ್ವವಿದ್ಯಾಲಯದ ಆಯವ್ಯಯದಲ್ಲಿ ಬಿ.ಇಡಿ ಪದವಿಯ ವಿದ್ಯಾರ್ಥಿಗಳಿಗೂ ಕ್ರೀಡಾಶುಲ್ಕ ನಿಗದಿಯಾಗಿರುವುದರಿಂದ ಕ್ರೀಡಾಶುಲ್ಕ ಪಾವತಿಸಬೇಕಾಗುತ್ತದೆ. ಅದನ್ನು ತಮ್ಮ ಕಾಲೇಜುಗಳ ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು. ತಮ್ಮ ವಿದ್ಯಾರ್ಥಿಗಳಿಗೆ ಕ್ರೀಡೆ ಆಯೋಜಿಸಿದಲ್ಲಿ ನಡೆಸಿ ಕೊಡಲಾಗುವುದು ಎಂದು ಹೇಳಿದರು. ಬಿ.ಇಡಿ ವಿದ್ಯಾರ್ಥಿಗಳೂ ಕೂಡ ವಿಶ್ವವಿದ್ಯಾಲಯದ ಮಟ್ಟದ ಕ್ರೀಡಾಕೂಟಗಳಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಬಹುದು ಎಂದರು. ಇದನ್ನು ಒಪ್ಪಲಾಯಿತು.

**3) ಡಾ. ಶಿವಕುಮಾರ್ ಜಿ.ಎಸ್.**

**ಅ) 2023-24ನೇ ಸಾಲಿನ ಬಿ.ಇಡಿ ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ ಆದೇಶ ಆಗದಿರುವುದು.**

ಡಾ. ಶಿವಕುಮಾರ್ ಜಿ.ಎಸ್. ಇವರು ಮಾತನಾಡಿ 2023-24ನೇ ಸಾಲಿನ 2024ರ ಡಿಸೆಂಬರ್ ತಿಂಗಳಲ್ಲಿ ನಡೆದ ಬಿ.ಇಡಿ ಪ್ರಾಯೋಗಿಕ ಪರೀಕ್ಷೆಗಳ ಪರೀಕ್ಷಕರ ಸಂಭಾವನೆ ಇಲ್ಲಿಯವರೆಗೂ ಬಂದಿರುವುದಿಲ್ಲ ಎಂದು ಹೇಳಿದರು. ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ 2024ರ ಡಿಸೆಂಬರ್ ತಿಂಗಳಲ್ಲಿ ನಡೆದ ಬಿ.ಇಡಿ ಪ್ರಾಯೋಗಿಕ ಪರೀಕ್ಷೆಗಳ ಪರೀಕ್ಷಕರು ಬಿಲ್ಲುಗಳನ್ನು ಪಾವತಿಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಸಂದರ್ಭದಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸಿರುವ ದರದಲ್ಲಿ ಹಾಗೂ ಕಂಪ್ಯೂಟರೀಕರಣದ ನಮೂನೆಯಲ್ಲಿ ಸಲ್ಲಿಸದೇ ಇದ್ದುದರಿಂದ ಬಿಲ್ಲುಗಳನ್ನು ಸರಿಪಡಿಸಿ ಸಲ್ಲಿಸುವಂತೆ ಯಥಾವತ್ತಾಗಿ ಸಂಬಂಧಿಸಿದವರಿಗೆ ಹಿದಿರುಗಿಸಲಾಗಿದೆ. ಬಿಲ್ಲುಗಳನ್ನು ಸರಿಪಡಿಸಿ ಸಲ್ಲಿಸಿದಲ್ಲಿ ತುರ್ತಾಗಿ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು. ಸಭೆಯು ಒಪ್ಪಿಗೆ ನೀಡಿತು.

**4) ಡಾ. ಚಿದಾನಂದ ಎನ್.ಕೆ.**

**ಬಿ.ಇಡಿ ಕಾಲೇಜಿನ ವಿಭಾಗಕ್ಕೆ ಯು.ಯು.ಸಿ.ಎಂ.ಎಸ್.ಗೆ ಸಂಬಂಧಿಸಿದಂತೆ ಪ್ರತ್ಯೇಕ ನೋಡಲ್ ಅಧಿಕಾರಿಯವರನ್ನು ನಿಯೋಜನೆ ಮಾಡುವ ಬಗ್ಗೆ.**

ಡಾ. ಚಿದಾನಂದ ಎನ್.ಕೆ. ಇವರು ಮಾತನಾಡಿ ಈಗ ನೇಮಕಾತಿಯಾಗಿರುವ ಯು.ಯು.ಸಿ.ಎಂ.ಎಸ್. ನೋಡಲ್ ಅಧಿಕಾರಿಗಳಾದ ಡಾ. ಸತ್ಯಪ್ರಕಾಶ್ ರವರು ಬಹಳ ಅಚ್ಚುಕಟ್ಟಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ, ಆದರೆ ಬಿ.ಇಡಿ ಪದವಿಯ ಶೈಕ್ಷಣಿಕ ಚಟುವಟಿಕೆಗಳು ಹಾಗೂ



ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ಕಾಲೇಜುಗಳಿಗಿಂತ ಭಿನ್ನವಾಗಿರುವುದರಿಂದ ಬಿ.ಇಡಿ ಶೈಕ್ಷಣಿಕ ನೋಡಲ್ ಅಧಿಕಾರಿಯವರನ್ನು ನಿಯೋಜನೆ ಮಾಡಿದಲ್ಲಿ ಬಿ.ಇಡಿ ಕಾಲೇಜುಗಳಿಗೆ ಸಂಬಂಧಿಸಿದ ಯು.ಯು.ಸಿ.ಎಂ.ಎಸ್. ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸಲು ಅನುಕೂಲವಾಗುತ್ತದೆ ಎಂದು ಹೇಳಿದರು. ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ಯು.ಯು.ಸಿ.ಎಂ.ಎಸ್ ತಂತ್ರಾಂಶವನ್ನು ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಒಂದೇ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಕಡ್ಡಾಯವಾಗಿ ನಿರ್ವಹಣೆ ಮಾಡಬೇಕಾಗುತ್ತದೆ. ವಿಂಗಡಣೆಗೆ ಅವಕಾಶ ಕಲ್ಪಿಸಲಾಗಿರುವುದಿಲ್ಲ. ಆದ್ದರಿಂದ ವಿಶ್ವವಿದ್ಯಾಲಯದ ಸಮಗ್ರ ಯು.ಯು.ಸಿ.ಎಂ.ಎಸ್ ನಿರ್ವಹಣೆಗೆ ಒಬ್ಬರು ನೋಡಲ್ ಅಧಿಕಾರಿಗಳ ಅಡಿಯಲ್ಲಿ ನಿರ್ವಹಣೆಯಾಗುತ್ತಿದೆ. ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಯು.ಯು.ಸಿ.ಎಂ.ಎಸ್. ನಲ್ಲಿ ಟಿಕೆಟ್ ರೈಸ್ ಮಾಡಲಾಗಿದೆ ಎಂದು ಹೇಳಿದರು.

ಬಿ.ಇಡಿ. ಪ್ರಾಂಶುಪಾಲರು ಪುನ: ಮಾತನಾಡಿ ವಿದ್ಯಾರ್ಥಿಗಳ ಅಂಕಪಟ್ಟಿಗಳು ಬಂದಿಲ್ಲದೇ ಇರುವುದರಿಂದ ವಿದ್ಯಾರ್ಥಿಗಳು ಮುಷ್ಕರ ಮಾಡಿರುತ್ತಾರೆ, ಆದ್ದರಿಂದ ಅಂಕಪಟ್ಟಿಗಳನ್ನು ಆದಷ್ಟು ಶೀಘ್ರವಾಗಿ ಕಳುಹಿಸಿಕೊಡುವಂತೆ ಕೋರಿದರು. ಇದಕ್ಕೆ ಉತ್ತರಿಸಿದ ಕುಲಸಚಿವ(ಪರೀಕ್ಷಾಂಗ)ರವರು ಎಲ್ಲಾ ಸೆಮಿಸ್ಟರ್‌ಗಳ ಅಂಕಪಟ್ಟಿಗಳು ರೆಡಿ ಇದೆ ಅಂಕಪಟ್ಟಿಗಳನ್ನು ಕಾಲೇಜುಗಳಿಗೆ ತೆಗೆದುಕೊಂಡು ಹೋಗುವಂತೆ ಕೋರಿದರು.

ಡಾ. ಪ್ರಭಾಕರ್ ಮಂಟೂರೆರವರು ಮಾತನಾಡಿ ಸ್ನಾತಕ ಪದವಿಯ ಪ್ರವೇಶ ಅಧಿಸೂಚನೆ ಪ್ರಕಟಿಸಲಾಗಿದೆ, ಇದಕ್ಕೆ ಯು.ಯು.ಸಿ.ಎಂ.ಎಸ್. ತಂತ್ರಾಂಶವನ್ನು ಪ್ರವೇಶಕ್ಕೆ ಅಣಿಗೊಳಿಸಿಕೊಡಬೇಕು, ಹಾಗೂ 2025–26ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಶುಲ್ಕದ ಮಾಹಿತಿಯನ್ನು ತುರ್ತಾಗಿ ಕಾಲೇಜುಗಳಿಗೆ ಕಳುಹಿಸಿಕೊಡುವಂತೆ ಕೋರಿದರು. ಇದಕ್ಕೆ ಒಪ್ಪಲಾಯಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು (ಪರೀಕ್ಷಾಂಗ) ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಸಹಿ/-
ಕುಲಪತಿಗಳು

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ